OS 48/2019
DW-01

<u>ದಿನಾಂಕಃ 03-02-2026.</u>

**<u>ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಪಾಟಿ ಸವಾಲುಃ ವಾದಿಗಳ ಪರವಾಗಿ ಶ್ರೀ SS ಮಾನ್ಯ ವಕೀಲರಿಂದಃ</u>**

ನಾನು 2 ನೇ ತರಗತಿಯವರಿಗೆ ಕನ್ನಡ ಭಾಷೆಯಲ್ಲಿ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ನನಗೆ ನನ್ನ ಹುಟ್ಟಿದ ದಿನಾಂಕ ಗೊತ್ತಿರುವುದಿಲ್ಲ. ನನಗೆ ನನ್ನ ಜನ್ಮ ದಿನಾಂಕ ತಿಳಿದಿದ್ದರೂ ಕೂಡಾ ಉದ್ದೇಶ ಪೂರ್ವಕವಾಗಿ ಗೊತ್ತಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜ ಶ್ರೀ ದಾವಲ್ ಸಾಬ್ ತಂದೆ ಬಡೆಸಾಬ ಚೋದಿ ಎಂದರೆ ಸರಿ. ನನ್ನ ಸದರಿ ಅಜ್ಜ ಇವರಿಗೆ ಇಬ್ಬರು ಮಕ್ಕಳು. ಸದರಿಯವರೇಂದರೆ ಶ್ರೀ ಅಬ್ದುಲ ಸಾಬ್ ಹಾಗೂ ರಸೂಲ್ ಸಾಬ್ ಎಂದರೆ ಸರಿ. ನನ್ನ ಸದರಿ ಅಜ್ಜ ದಾಬಲ್ ಸಾಬ್ ಇವರು ಸನ್ 1970 ರಲ್ಲಿ ಕಾಲವಾಗಿರುತ್ತಾರೆ. ಆದರೆ ನನಗೆ ನಿಖರವಾದ ದಿನಾಂಕ ಗೊತ್ತಿರುವುದಿಲ್ಲ. ನನ್ನ ಸದರಿ ಅಜ್ಜ ಇವರ ಮರಣ ಪ್ರಮಾಣ ಪತ್ರವನ್ನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ನನ್ನ ಸದರಿ ಅಜ್ಜ ತೀರಿಕೊಂಡಾಗ ನಾನು 25 ವರ್ಷ ವಯಸ್ಸಿನವಾಗಿದ್ದೆ. ನನಗೆ ಈಗ 70 ವರ್ಷ ವಯಸ್ಸು. ದಾವಲ್ ಸಾಬ್ ಮಗ ರಸೂಲ್ ಸಾಬ್ ಇವರು ಮೊದಲು ತೀರಿಕೊಂಡಿರುತ್ತಾರೆ. ಸದರಿ ರಸೂಲ್ ಸಾಬ್ ಇವರು ಸನ್ 1987 ರಲ್ಲಿ ಕಾಲವಾಗಿರುತ್ತಾರೆ. ನನ್ನ ತಂದೆ ಸನ್ 1970 ರಲ್ಲಿ ಕಾಲವಾಗಿರುತ್ತಾರೆ. ನನ್ನ ತಂದೆ ತೀರಿಕೊಂಡಾಗ ನನ್ನ ವಯಸ್ಸು 25 ರಿಂದ 30 ವರ್ಷ ಮೇಲ್ಪಟ್ಟಿತ್ತು. ನಾನು ನನ್ನ ತಂದೆಯವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ ಆದರೆ ಸದರಿ ರಸೂಲ್ ಸಾಬ್ ಇವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ಸದರಿ ರಸೂಲ್ ಸಾಬ್ ಇವರು ವಾದಿಯ ತಂದೆ ಎಂದರೆ ಸರಿ.

2. ನಮ್ಮ ಮನೆತನಕ್ಕೆ ಒಟ್ಟು 19 ಎಕರೆ ಜಮೀನು ಇರುತ್ತವೆ. ಸದರಿ ಸ್ವತ್ತುಗಳ ಸರ್ವೆ ನಂಬರಗಳೇಂದರೇ, 81, 82, 83 ಹಾಗೂ 140 ಆಗಿರುತ್ತವೆ. ದಾವಾ ಸ್ವತ್ತು ಸ.ನಂ.820 ನ್ನು ಶ್ರೀ ನಾಗಪ್ಪ ಎನ್ನುವವರು ನನ್ನ ತಂದೆಗೆ ಮಾರಾಟ ಮಾಡಿರುತ್ತಾರೆ. ಸದರಿ ನಾಗಪ್ಪ ಇವರು ನನ್ನ ತಂದೆಗೆ ಸದರಿ ಸ್ವತ್ತನ್ನು ಯಾವ ವರ್ಷ ಮಾರಾಟ ಮಡಿರುತ್ತಾರೆ ಎಂದು ಗೊತ್ತಿರುವುದಿಲ್ಲ ಆದರೆ ರೂ.20,000/- ಗಳಿಗೆ ಮಾರಾಟ ಮಾಡಿರುತ್ತಾರೆ. ಸದರಿ ಮಾರಾಟ ಮಾಡುವ ಸಂದರ್ಭದಲ್ಲಿ ಸ್ತಳದಲ್ಲಿ ಸದರಿ ರಸೂಲ್ ಸಾಬ್ ಇವರು ಹಾಜರಿರಲಿಲ್ಲ. ಸದರಿ ಖರೀದಿ ಪತ್ರವನ್ನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ. ಸದರಿ ಸ್ವತ್ತನ್ನು ನನ್ನ ತಂದೆಯವರು ಖರೀದಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ. 820 ನಮ್ಮ ಹಿರಿಯರ ಸ್ವತ್ತು ಎಂದರೆ ಸರಿಯಲ್ಲ. ಸದರಿ ಸ.ನಂ.820 ಇದು ನನ್ನ ತಂದೆಯವರ ಹೆಸರಿಗೆ ಯಾವ ವರ್ಷದಲ್ಲಿ ಆಗಿರುತ್ತದೆ ಎಂದು ನನಗೆ ಹೇಳಲು ನೆನಪಿರುವುದಿಲ್ಲ. ನಮ್ಮ ಮನೆತನದ ಸ್ವತ್ತುಗಳಲ್ಲಿ ಸದರಿ ರಸೂಲ್ ಸಾಬ್ ಇವರಿಗೆ ಯಾವುದೇ ಸ್ವತ್ತು ಬಂದಿರುವುದಿಲ್ಲ. ಸದರಿ ರಸೂಲ್ ಸಾಬ್ ಇವರು ತಮ್ಮ ತಂದೆ ದಾವಲ್ ಸಾಬ್ ಇವರನ್ನು ನೋಡಿಕೊಳ್ಳದ ಕಾರಣ ಅವರ ಸ್ವತ್ತುಗಳಲ್ಲಿ ಅವರಿಗೆ ಯಾವುದೇ ಹಿಸ್ಸೆಯನ್ನು ಕೊಟ್ಟಿರುವುದಿಲ್ಲ.

3. ಸ.ನಂ.81, 82, 83 ಹಾಗೂ 140 ಇವುಗಳನ್ನು ನಾನು ದುಡಿದ ಕೂಲಿ ಹಣದಿಂದ ಖರೀದಿ ಮಾಡಿರುತ್ತೇನೆ. ನಾನು ಸುಮಾರು 4-5 ವರ್ಷಗಳಿಂದ ಸದರಿ ಕೂಲಿ ಹಣವನ್ನು ಕೂಡಿಟ್ಟಿರುತ್ತೇನೆ. ನನ್ನ ತಂದೆ ಹಾಗೂ ಅವರ ತಮ್ಮ ರಸೂಲ್ ಸಾಬ್ ಇವರು ತಮ್ಮ ಹತ್ತಿರ ಹಣವಿರದ ಕಾರಣ ಸದರಿ ಸ್ವತ್ತುಗಳನ್ನು ಖರೀದಿ ಮಾಡದ ಕಾರಣ ನನ್ನ ಅಜ್ಜ ನನಗೆ ಕೇಳಿದ್ದರ ಮೇರೆಗೆ ನಾನು ಅವುಗಳನ್ನು ಖರೀದಿ ಮಾಡಿರುತ್ತೇನೆ. ನಾನು ಸದರಿ ಜಮೀನುಗಳನ್ನು ಖರೀದಿ ಮಾಡಲು ರೂ.50, 100, 500 ರ ನೋಟುಗಳನ್ನು ಕೊಟ್ಟಿದ್ದು ಆದರೆ ಎಷ್ಟು ನೋಟುಗಳು ಇದ್ದವು ಎಂದು ಹೇಳಲು ಬರುವುದಿಲ್ಲ. ನಾನು

ಸದರಿ ಖರೀದಿ ಪತ್ರದ ಮೇಲೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ಕನ್ನಡ ಭಾಷೆಯಲ್ಲಿ ಸದರಿ ಖರೀದಿ ಪತ್ರ ನಿಡಿ.6 ಕ್ಕೆ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಈಗ ನಿಡಿ.6 ನ್ನು ತೋರಿಸಿ ನೀವು ಇದರಲ್ಲಿ ಕನ್ನಡದಲ್ಲಿ ಸಹಿ ಮಾಡಿರುತ್ತೀರಾ ಎಂದು ಕೇಳಿದ್ದಕ್ಕೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಾನು ಸದರಿ ದಾಖಲೆಗೆ ಉರ್ದು ಭಾಷೆಯಲ್ಲಿಯೂ ಕೂಡಾ ಸಹಿ ಮಾಡಿರುವುದಿಲ್ಲ. ನಿಡಿ.6 ರಲ್ಲಿ ಸದರಿ ದಾವಲ್ ಸಾಬ್ ಇವರು ತಮ್ಮ ಇಬ್ಬರು ಮಕ್ಕಳು ಅಬ್ದುಲ್ ಸಾಬ್ ಮತ್ತು ರಸೂಲಿ ಸಾಬ್ ಇವರುಗಳು ಭೂಮಿಗಳನ್ನು ವಾರಸುದಾರು ಹಾಗೂ ಹಕ್ಕುದಾರರು ಇರುತ್ತಾರೆ ಎಂದು ನಮೂದು ಮಾಡಲಾಗಿರುತ್ತದೆ ಎಂದು ಹೇಳಿದ್ದಕ್ಕೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಸದರಿ ನಿಡಿ.6 ರ ಒಕ್ಕಣೆಗಳನ್ನು ನನ್ನ ಯಜಮಾನರು ಬರೆಸಿರುತ್ತಾರೆ. ಸದರಿ ನಿಡಿ.6 ಕ್ಕೆ ಮೊದಲು ಸದರಿ ದಾವಲ್ ಸಾಬ್, ನಂತರ ಸದರಿ ಅಬ್ದುಲ್ ಸಾಬ್ ಅದರ ನಂತರ ರಸೂಲ್ ಸಾಬ್ ಇವರುಗಳು ಉರ್ದು ಭಾಷೆಯಲ್ಲಿ ಸಹಿ ಮಾಡಿರುತ್ತಾರೆ. ಸದರಿ ನಿಡಿ.6 ರ ಒಕ್ಕಣೆಗಳನ್ನು ತಹಶೀಲ್ ಕಚೇರಿಯಲ್ಲಿ ತಯಾರು ಮಾಡಲಾಗಿದ್ದು ಆದರೆ ಅದನ್ನು ಯಾರು ತಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಅಜ್ಜ ದಾವಲ್ ಸಾಬ್ ಇವರು ತೀರಿಕೊಂಡ ನಂತರ ನಾನು ಹಾಗೂ ನನ್ನ ತಂದೆ ನಿಡಿ.6 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಸದರಿ ಅಜ್ಜ ಸದರಿ ಸ್ವತ್ತುಗಳನ್ನು ನನಗೆ ಸನ್ 1970 ರಲ್ಲಿ ರೂ.2000 ಗಳಿಗೆ ಮಾರಾಟ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸನ್ 1970 ರಲ್ಲಿ ನಾನು ಹುಟ್ಟಿರಲಿಲ್ಲ ಎಂದರೆ ಸರಿಯಲ್ಲ.

**ಸಾಕ್ಷಿಯ ಮುಂದುವರೆದ ಪಾಟಿ ಸವಾಲು ಮಾಡಲು ವೇಳೆ ಕೋರಿದ್ದರಿಂದ ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.